ಸಾಕ್ಷಿಯನ್ನು ಪುನಃ ದಿ.02.03.2026 ರಂದು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ.ಎಸ್.ಪುಟ್ಟರಾಜಣ್ಣ ವಕೀಲರಿಂದ ಆರೋಪಿತರ ಪರವಾಗಿ :**

3. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರವನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳಿದ್ದೇನೆ. ನನಗೆ ಈಗ ಸರಿಯಾಗಿ ಕಿವಿ ಕೇಳುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರವನ್ನು ನನ್ನ ಮಗನ ಮಾತನ್ನು ಕೇಳಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತಹ ಘಟನೆ ನಡೆದಿಲ್ಲ, ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮತ್ತು ಆರೋಪಿತರು ದಾಯಾದಿಗಳು. ನಮಗೂ ಆರೋಪಿತರಿಗೂ ಮೊದಲಿನಿಂದ ಆಗುವುದಿಲ್ಲ ಎಂದರೆ ಸಣ್ಣಪುಟ್ಟ ಮನಸ್ತಾಪಗಳು ಇದ್ದವು ಎಂದು ಸಾಕ್ಷಿ ಹೇಳುತ್ತಾರೆ. ಪೋಲೀಸರ ಮುಂದೆ ಹೇಳಿಕೆ ಕೊಟ್ಟ ದಿನಾಂಕ ನೆನಪಿಲ್ಲ. ಘಟನೆ ಆಗಿದ್ದು ದಿ.24.05.2019 ರಂದು. ಘಟನೆಯಾದ ದಿವಸ ನಾನು ಅಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಘಟನೆ ಆಗಿದ್ದು ಖುದ್ದಾಗಿ ನೋಡಿಲ್ಲ, ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನ್ಯಾಯ ಹೇಳುತ್ತಾರೆಂಬ ದೃಷ್ಟಿಯಿಂದ ಆರೋಪಿತರು ನನ್ನ ಮಗನಿಗೆ ಹೊಡೆಯದಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು